ಓ.ಎಸ್. ನಂ.240-2013

ದಿನಾಂಕ : 24-7-2015

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲು ಃ

ನಾನು ಅವಿದ್ಯಾವಂತನಿರುತ್ತೇನೆ. ಈ ದಾವೆಗೆ ಮಾಹಿತಿಯನ್ನು ವಕೀಲರಿಗೆ ನಾನೇ ಕೊಟ್ಟಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಈ ದಾವೆಯನ್ನು ಪ್ರತಿವಾದಿಯರು ನನ್ನ ಜೊತೆ ಜಗಳ ಮಾಡಿದ್ದರಿಂದ ದಾಖಲಿಸಿರುತ್ತೇನೆ. ದಾವಾ ಆಸ್ತಿಯು ನನ್ನ ತಂದೆಯ ಆಸ್ತಿ ಇರುತ್ತದೆ. ಅವರು ಅದನ್ನು ಧಮಕಿಯಿಂದ ಪಡೆಯುತ್ತಿದ್ದಾರೆ ಆದ್ದರಿಂದ ಸಲ್ಲಿಸಿದ್ದೇನೆ. ಸರ್ವೆ ನಂ. 130/4ಬಿ ಹಾಗೂ 127/2 ಇವು ನಮ್ಮ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ನಮ್ಮ ಅಜ್ಜನ ಆಸ್ತಿಗಳು ಇರುತ್ತವೆ. ಈ ಬಗ್ಗೆ ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ದಿ. 15-2-2000 ದಂದು ನಾನು ಹೇಳಿದಂತೆ ಯಾರು ಯಾರಿಗೆ ಖರೀದಿ ಕೊಟ್ಟಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಸರ್ವೆ ನಂ. 280/1ಎ/2 ಕ್ಷೇತ್ರ 2 ಎಕರೆ 13 ಗುಂಟೆ ಇದು ಈ ದಾವೆಯ ದಾವಾ ಆಸ್ತಿ ಇರುವುದಿಲ್ಲ ಎಂದರೆ ಸರಿ. ಅದನ್ನು 1 ನೇ ಪ್ರತಿವಾದಿಯ ತಂದೆ ಖರೀದಿಸಿದ ಆಸ್ತಿ ಎಂದರೆ ಸರಿ. ಅದನ್ನು ಸದರಿ ಬಸವಣ್ಣೆಪ್ಪ ನಮ್ಮ ಮನೆತನದಿಂದ ಬೇರೆ ಆದ ನಂತರ ಖರೀದಿಸಿರುತ್ತಾನೆ ಎಂದರೆ ಸರಿ. ಸದರಿ ಈ ಆಸ್ತಿಯಲ್ಲಿ ನನಗೆ ಮತ್ತು 2 ನೇ ಪ್ರತಿವಾದಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ.

ಬಸಪ್ಪ ಎಂದರೆ ನಮ್ಮ ಅಜ್ಜ ಇರುತ್ತಾನೆ ಎಂದರೆ ಸರಿ. ನಮ್ಮ ಅಜ್ಜ ಬಹಳ ವರ್ಷಗಳ ಹಿಂದೆ ಮರಣ ಹೊಂದಿರುತ್ತಾನೆ. ಬಸಪ್ಪನಿಗೆ ಶಿವಪ್ಪ ಮೊದಲನೇ ಮಗ ಎಂದರೆ ಸರಿ. ಬಸವಣ್ಣೆಪ್ಪಾ ಚಿಕ್ಕ ಮಗ ಎಂದರೆ ಸರಿ. ನನ್ನ ತಂದೆ ಶಿವಪ್ಪ ಇರುತ್ತಾರೆ. ನನ್ನ ತಂದೆಗೆ ನಾನು ಹಾಗೂ 2 ನೇ ಪ್ರತಿವಾದಿ ಇಬ್ಬರು ಗಂಡು ಮಕ್ಕಳು ಇರುತ್ತೇವೆ. ನನ್ನ ಚಿಕ್ಕಪ್ಪನಾದ ಬಸವಣ್ಣೆಪ್ಪಾ ಈತನಿಗೆ 1 ನೇ ಪ್ರತಿವಾದಿ ಹಾಗೂ 3 ನೇ ಪ್ರತಿವಾದಿ ಮಕ್ಕಳು ಇರುತ್ತಾರೆ. ಶಿವಪ್ಪ ಈತ ನಮ್ಮ ಅಜ್ಜ ಇದ್ದಾಗಿನಿಂದಲೇ ಬೇರೆ ವಾಸವಾಗುತ್ತಾ ಬಂದಿರುತ್ತಾರೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ನನ್ನ ತಂದೆ ಹೇಳುತ್ತಿದ್ದರು. ನಾನು 1963 ರಲ್ಲಿ ಜನಿಸಿರುತ್ತೇನೆ ಎಂದರೆ ಸರಿ. 1963 ರ ಪೂರ್ವದಲ್ಲಿನ ಕುಟುಂಬದ

ವಿಷಯಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ

ಹೆ ಪ್ರ ದ ನ್ಯಾ ದಂ, ಬೈಲಹೊಂಗಲ